doc-613
T P-2

Reg No B G 158 26 12 72

In The State First Golden Jubilee Celebrated Paper 'Satyavadi' daily, Mysore 4

ರಾಷ್ಟ್ರದಲ್ಲಿ ಪ್ರಥಮ
ಸ್ವರ್ಣ
ಮಹೋತ್ಸವ
ಸಂಭ್ರಮಿಸಿದ
ಪತ್ರಿಕೆ

ಸತ್ಯವಾದಿ

56th Year of Publication

★

News, Views, Dharmic Moral Ethical Matters

ಸ್ಥಾಪಕರು: ಅರಮನೆ ಸಿರಸ್ತೇದಾರ್ ಎಂ.ವಿ. ಸುಬ್ಬರಾವ್ ಸಂಪಾದಕರು: ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ರಾಜಾಜಿಯವರ ನಿಧನ ಮತ್ತು ಅಂತ್ಯಕ್ರಿಯೆ

ಮಂಡ್ಯ ಜಿಲ್ಲಾ ಬಂದೀಖಾನೆಯ
ಅಧಿಕಾರಿಗಳ ಕಛೇರಿ, ಮಂಡ್ಯ.

ಟೆಂಡರು ಪ್ರಕಟಣೆ

ಈ ಮೂಲಕ ಸೆಮಸ್ತ ಜನಗಳಿಗೂ ಪ್ರಚಾರ ಪಡಿಸುವುದೇನೆಂದರೆ– ಮಂಡ್ಯ ಜಿಲ್ಲಾ ಬಂದೀಖಾನೆಯಲ್ಲಿರುವ ಬಂದಿಗಳ ಉಪಯೋಗಕ್ಕಾಗಿ ಬೇಕಾಗುವ ಆಹಾರ ಮತ್ತಿತರ ಪದಾರ್ಥಗಳನ್ನು ಸರಬರಾಜು ಮಾಡಲು ನಾಲ್ಕು ಪ್ರತಿಗಳ ಪ್ರಿಂಟೆಡ್ ಪ್ರತಿಯಲ್ಲಿ ಮೊಹರಂದ ದರಖಾಸ್ತುಗಳನ್ನು ಈ ಕೆಳಗೆ ಸಹಿ ಮಾಡಿರುವ ಅಧಿಕಾರಿಗಳು ತಾ॥ 18-1-73 ರಂದು ಬೆಳಿಗ್ಗೆ 10 ಘಂಟೆ ವರೆವಿಗೆ ತೆಗೆದುಕೊಳ್ಳುವರು. ಈ ಪದಾರ್ಥಗಳ ಸರಬರಾಜಿನ ಅವಧಿಯು 1973-74 ನೇ ವರ್ಷಕ್ಕೆ ದ್ದು ತಾ॥ 1-4-73 ರಿಂದ 31-3-74 ರ ವರೆವಿಗಿರುತ್ತದೆ. ಟೆಂಡರು ನಕಲಿನಲ್ಲಿರುವ ಷರತ್ತುಗಳಿಗೆ ದರಖಾಸ್ತುದಾರರು ಒಳಪಟ್ಟಿರುತ್ತಾರೆ. ನಿಗದಿಯಾದ ಕಾಲದ ಅವಧಿಯನ್ನು ಮೀರಿ ಬರುವ ದರಖಾಸ್ತುಗಳನ್ನು ಸ್ವೀಕರಿಸುವುದಿಲ್ಲ ಟೆಂಡರು ದರಖಾಸ್ತುಗಳನ್ನು ಈ ಕೆಳಗೆ ಸಹಿಮಾಡಿರುವವರಿಂದ ಅದಕ್ಕೆ ಬೇಕಾಗಿರುವ ನಕಲುಗಳಿಗೆ ಒಂದು ರೂ. ನಂತೆ ಪಾವತಿ ಮಾಡಿ ಕಛೇರಿಯ ಕೆಲಸದ ವೇಳೆಯಲ್ಲಿ ಪಡೆಯಬಹುದು.

(ಸಹಿ) ಕೆ. ಗರಿತಿಮ್ಮಯ್ಯ
ಜಿಲ್ಲಾ ಬಂದೀಖಾನೆಯ ಅಧಿಕಾರಿ
ಮಂಡ್ಯ

ಬಿಜಾಪುರಕ್ಕೆ ಅರಣ್ಯ ಹುಲ್ಲು

ಬೆಂಗಳೂರು— ಬೆಳಗಾವಿ ಅರಣ್ಯ ವಿಭಾಗಾಧಿಕಾರಿಗಳು ಮೂವತ್ತು ವಾಗನ್‌ಗಳ ವಿಶೇಷ ಟ್ರೈನೊಂದರಲ್ಲಿ, ಬಿಜಾಪುರದ ಅಭಾವಪೀಡಿತ ಪ್ರದೇಶಗಳಿಗಾಗಿ ಅರಣ್ಯ ಹುಲ್ಲು ಕಳುಹಿಸಿದ್ದಾರೆ.

ರಾಜಾಜಿಯವರ ನಿಧನ

ಮದರಾಸು— ಭಾರತದ ಪ್ರಖ್ಯಾತ ಹಿರಿಯ ರಾಜಕಾರಣಿಯಾದ ಶ್ರೀ ಚಕ್ರವರ್ತಿ ರಾಜಗೋಪಾಲಾಚಾರಿಯವರು ನಿನ್ನೆ ಸಂಜೆ 5-45 ರಲ್ಲಿ ತಮ್ಮ 94 ನೇ ವಯಸ್ಸಿನಲ್ಲಿ ಜನರಲ್ ಆಸ್ಪತ್ರೆಯಲ್ಲಿ ಸ್ವರ್ಗಸ್ಥರಾದರು – ಅವರ ಪಾರ್ಥಿವ ಶರೀರವು ರಾಜಾಜಿ ಹಾಲಿಗೆ ತರಲಾಯಿತು – ಭಾರತಾಧ್ಯಕ್ಷ ಶ್ರೀ ಗಿರಿಯವರೂ, ಗೌರ್ನರ್ ಪ್ರಧಾನರೂ ಮೊದಲು ಪುಷ್ಪಗುಚ್ಛ ಅರ್ಪಿಸಿದರು – ಗುಂಪುಗುಂಪಿನಲ್ಲಿ ಜನರು ಕ್ಯೂನಲ್ಲಿ ನಿಂತು ಅವರ ಅಂತ್ಯ ದರ್ಶನ ಪಡೆಯುತ್ತಿದ್ದರು – ಭಾರಿ ಯೋಧರು, ಮದ್ರಾಸಿನ ಮಾಜಿ ಮುಖ್ಯಮಂತ್ರಿಗಳು, ಭಾರತದ ಗೌರ್ನರ್‌ಜನರಲ್‌ರವರು ಆಗಿದ್ದ ಇವರಿಗೆ ಭಾರತರತ್ನ ಪ್ರಶಸ್ತಿಯು ದೊರೆತಿತ್ತು – ಇವರು ಸ್ವತಂತ್ರ ಪಕ್ಷದ ಸ್ಥಾಪಕರು – ಸರ್ಕಾರದ ಎಲ್ಲಾ ಗೌರವದೊಡನೆ ಈದಿನ ಸಂಜೆ ಇವರ ಅಂತ್ಯಯಾತ್ರೆ ನಡೆಯುವುದು – 7 ದಿನಗಳು ಶೋಕ ದಿನಗಳೆಂದು ಸಾರಲಾಗಿದೆ.

ಮಹಾರಾಜರವರ ಶೋಕ

ಮೈಸೂರು— ದಿ॥ ರಾಜಾಜಿಯವರ ಪುತ್ರ ಶ್ರೀ ಸಿ ಆರ್ ನರಸಿಂಹರಿಗೆ, ಶ್ರೀಮತಿ ಮಹಾರಾಜ ಶ್ರೀ ಜಯಚಾಮರಾಜ ಒಡೆಯರ್‌ರವರು ಕಳುಹಿಸಿದ ಸಂದೇಶದಲ್ಲಿ, ನಿಮ್ಮ ಪೂಜ್ಯ ಪಿತಾಮಹ ಶ್ರೀ ಚಕ್ರವರ್ತಿ ರಾಜಗೋಪಾಲಾಚಾರ್ಯರು ಕಾಲವಶರಾದ್ದರಿಂದ ತುಂಬಾ ದುಃಖವಾಗಿದೆ; ನಾವು ನಿಮಗೆ ಹೃತ್ಪೂರ್ವಕ ಶೋಕ ಸೂಚಿಸುತ್ತೇವೆ, ಎಂದು ತಿಳಿಸಿದ್ದಾರೆ.

ತರೀಕೆರೆ ಲಕ್ಷ್ಮಣಳ್ಳಿ ಗ್ರಾಮ ಜಿಲ್ಲಾ ಹೈಸ್ಕೂಲು ವಿದ್ಯಾರ್ಥಿಗಳು ತುಂಬಾ ಮೇವು ಶೇಖರಿಸಿ, ಗುಲ್ಬರ್ಗಾಕ್ಕೆ ಕಳುಹಿಸಲು ಬಲ್ಲಾರಿ ಡಿಸ್ಟ್ರಿಕ್ಟ್ ಆಫೀಸರ್‌ಗೆ ಅಪೀಲು ಮಾಡಿದ್ದಾರೆ.

ಕಾಂಗ್ರೆಸ್ ಅಧಿವೇಶನ

ಕಲ್ಕತ್ತಾ— ಕಾಂಗ್ರೆಸ್ ಅಧ್ಯಕ್ಷರು ಡಾ॥ ಶಂಕರ ದಯಾಳ್ ಶರ್ಮರನ್ನು ನಿನ್ನೆ ಸಿಲ್ವರ್ ಸ್ಟೇಷನ್ನಿನಿಂದ ಕಾಂಗ್ರೆಸ್ ಅಧಿವೇಶನದ ಸ್ಥಳವಾದ ಬಿದಾನ್‌ನಗರಕ್ಕೆ ಭಾರಿ ಮೆರವಣಿಗೆಯಲ್ಲಿ ಕರತರಲಾದಾಗ ಮೂರು ಮಿಲಿಯ ಜನರ ಚಿರಸ್ಮರಣೀಯ ಸ್ವಾಗತ ದೊರೆಯಿತು – ಮೆರವಣಿಗೆ ವಿವೇಕಾನಂದ ರಸ್ತೆಗೆ ಬಂದಾಗ, ನಗರದ ಬ್ಲಾಕ್ ಕಾಂಗ್ರೆಸ್‌ನವರು ಶುಭಕೋರಿ 1001 ಶ್ವೇತ ಪಾರಿವಾಳಗಳನ್ನು ಗಗನಕ್ಕೆ ಬಿಟ್ಟರು – ಅಧಿವೇಶನದಲ್ಲಿ ತಮ್ಮ ಬೆಲ್ಟುಗಳಿಗೆ ಸರಪಣಿಯಿಂದ ಬಂದೂಕಗಳನ್ನು ಕಟ್ಟಿರುವ ಸಶಸ್ತ್ರ ಪೋಲೀಸರು ಬಹು ಮಂದಿ ಕಾಣುತ್ತಿದ್ದರು.

ಬಂಗ್ಲಾದೇಶಕ್ಕೆ ಮನ್ನಣೆ

ನವದೆಹಲಿ— ವಿಶ್ವಸಂಸ್ಥೆಯಲ್ಲಿ ಯುಗೋಸ್ಲೋವಿಯಾ ಮತ್ತು ಅರ್ಜೆಂಟೈನದ ಠರಾವುಗಳನ್ನು ಸ್ವೀಕರಿಸಿ, ಬಂಗ್ಲಾದೇಶವು ಒಂದು ಸ್ವಾಮಿತ್ವ ಮತ್ತು ಸ್ವತಂತ್ರ ರಾಷ್ಟ್ರವಾಗಿ ವಿಶ್ವಸಂಸ್ಥೆಯಲ್ಲಿ ಕುಳಿತು ಕೊಳ್ಳುವ ಹಕ್ಕಿಗೆ ಸಾಕಷ್ಟಾನ ಹಾನ್ಯತೆ ನೀಡಿದ್ದಲ್ಲದೆ, ಷೇಕ್ ಮುಜಿಬರ್ ರೆಹಿಮಾನರ ಸರ್ಕಾರ ವಾಸ್ತವಿಕವಾಗಿ ಮನ್ನಣೆ ನೀಡಿದೆ.

ಅನ್ನ ಸತ್ಯಾಗ್ರಹ ಯೋಜನೆ

ಮೈಸೂರು— ತಮ್ಮ ಸಮಸ್ಯೆಗಳ ಪರಿಹಾರಕ್ಕಾಗಿ, ಮೈಸೂರು ವಿಭಾಗದ ಟೆಲಿಗ್ರಾಫ್ ಇಂಜಿನೀರಿಂಗ್ ನೌಕರರು ಟೆಲಿಗ್ರಾಫ್ ಇಂಜಿನಿಯರ್ ಆಫೀಸ್ ಮುಂದೆ ಜನವರಿ 5 ರಿಂದ ಸಾಮೂಹಿಕ ತಂಡತಂಡ ಉಪವಾಸ ಕೈಗೊಳ್ಳಲು ನಿರ್ಧರಿಸಿದ್ದಾರೆ.

ಪರಿಹಾರ

ಚಾಮರಾಜನಗರ— ಪ್ರವಾಹ ಮತ್ತು ಬಿರುಗಾಳಿ ಹಾವಳಿಯಿಂದ ಸಂಕಟಕ್ಕೀಡಾಗಿರುವ ಕೊಳ್ಳೇಗಾಲ, ಯಳಂದೂರು ಮತ್ತು ಚಾಮರಾಜನಗರ ತಾಲ್ಲೂಕುಗಳಲ್ಲಿ 3 ವರ್ಷ ಕಾಲ ಭೂ ಕಂದಾಯ ವಸೂಲಿ ವಜಾಮಾಡಲಾಗಿದೆ – ಈ ತಾಲ್ಲೂಕುಗಳಲ್ಲಿ ಭತ್ತದ ಲೆವಿಯನ್ನೂ ವಜಾ ಮಾಡಲಾಗಿದೆ.

ಹೋಟಲಿನವರ ಸತ್ಯಾಗ್ರಹ

ತುಮಕೂರು— ವಿದ್ಯಾರ್ಥಿಗಳು ತಿಂಡಿ ಬೆಲೆ ಇಳಿಯಬೇಕೆಂಬ ಚಳವಳಿಗಾಗಿ, ಹೋಟಲುಗಳನ್ನು ಅನಿರ್ದಿಷ್ಟ ಕಾಲ ಮುಚ್ಚಲು ಹೋಟಲು ವರ್ತಕರ ಸಂಘವು ನಿರ್ಧರಿಸಿರುವುದಾಗಿ ಆದರ ಅಧ್ಯಕ್ಷರು ಪತ್ರಿಕೆಯವರಿಗೆ ತಿಳಿಸಿದರು.

ಮಂತ್ರಿ ವೆಂಕಟರತ್ನಂರವರ ನಿಧನ

ವಿಜಯವಾಡ— ಪ್ರತ್ಯೇಕ ಆಂಧ್ರಕ್ಕಾಗಿ ಹೋರಾಡುತ್ತ, ಮಂತ್ರಿಪದವಿಗೆ ರಾಜೀನಾಮೆ ಕೊಟ್ಟ ವ್ಯವಸಾಯ ಮಂತ್ರಿ ಶ್ರೀ ವೆಂಕಟರತ್ನಂ ನಿನ್ನೆ ಹೃದಯ ಘಾತದಿಂದ ನಿಧನರಾದರು.

ಅಂತ್ಯಕ್ರಿಯೆ

ಶ್ರೀ ಚಕ್ರವರ್ತಿ ರಾಜಗೋಪಾಲಾಚಾರಿಯವರ ಅಂತ್ಯಕ್ರಿಯೆ ಈ ಸಂಜೆ ನೆರವೇರಿತು ಮದ್ರಾಸಿನ ರಾಜಾಜಿ ಹಾಲಿನಿಂದ 3 ಕಿಲೋ ಮೀಟರು ದೂರದ ಮೆರವಣಿಗೆಯನ್ನು ಶೋಕತಪ್ತ ಜನಸ್ತೋಮ ವೀಕ್ಷಿಸಿತು ಅಂತ್ಯಕ್ರಿಯೆಯಲ್ಲಿ ರಾಷ್ಟ್ರಪತಿ ಶ್ರೀ ಗಿರಿ ಮತ್ತು ನಾಯಕರು ಭಾಗವಹಿಸಿದ್ದರು

●

ಬೊಂಬಾಯಿ— ನಿನ್ನೆ ಕುದುರೆ ಜೂಜಿನಲ್ಲಿ ಜಾಕ್‌ಪಾಟ್ ಹಣ ರೂ. 286023 ಒಂದೇಒಂದು ಟಿಕೀಟಿಗೆ ದೊರೆ.

ಮೈಸೂರು ಪಿ. ಡಬ್ಲ್ಯು. ಡಿ.

ಟೆಂಡರ್ ಪ್ರಕಟಣೆ

4 / 72-73 ತಾ. 15-12-72

ಈ ಕೆಳಗೆ ಕಂಡ ಕೆಲಸಗಳಿಗಾಗಿ ಸೂಕ್ತ ವರ್ಗದ ಮೈಸೂರು ಪಿ. ಡಬ್ಲ್ಯು. ಡಿ. ಯಲ್ಲಿ ರಿಜಿಸ್ಟರ್ ಆಗಿರುವ ಕಂಟ್ರಾಕ್ಟರ್‌ಗಳಿಂದ ವಿಧಾಯಕವಾದ ಫಾರಂಗಳಲ್ಲಿ ಲಕೋಟೆಯ ಮೇಲೆ ಕೆಲಸದ ಹೆಸರು ಬರೆದ ಮೊಹರಾದ ಶೀಕಡಾವಾರು ಟೆಂಡರ್‌ಗಳನ್ನು ದ್ವಿಪ್ರತಿಗಳಲ್ಲಿ 30-12-72 ರ ಮಧ್ಯಾಹ್ನ 4 ಗಂಟೆಯ ವರೆಗೆ ಆಹ್ವಾನಿಸಲಾಗಿದೆ.

ಕಾಲಂ ನಂ 6 ರಲ್ಲಿ ಸೂಚಿಸಿರುವ ದರ ಪಾವತಿ ಮಾಡಿದಲ್ಲಿ 23-12-72 ರಿಂದ 29-12-72 ರ ವರೆಗೆ ಕೆಲಸದ ಎಲ್ಲಾ ದಿನಗಳಲ್ಲಿ, ಕಛೇರಿ ಕೆಲಸದ ವೇಳೆಗಳಲ್ಲಿ ಖಾಲಿ ಟೆಂಡರ್ ಫಾರಂಗಳನ್ನು ಕೊಡಲಾಗುವುದು. ಕಾಲಂ ನಂ. 4 ರಲ್ಲಿ ಸೂಚಿಸಿರುವ ಅರ್ನೆಸ್ಟ್ ಹಣ ಠೇವಣಿ ಕಟ್ಟಿದ್ದಕ್ಕೆ ಖಜಾನೆ ಚಲನ್ನನ್ನು ಟೆಂಡರ್‌ಗಳ ಜೊತೆ ಕೊಡಬೇಕು. ಯಾವುದೇ ಅಥವಾ ಎಲ್ಲಾ ಟೆಂಡರ್‌ಗಳನ್ನು ಯಾವ ಕಾರಣಗಳನ್ನು ಕೊಡದೆ ನಿರಾಕರಿಸುವ ಹಕ್ಕು ಟೆಂಡರ್‌ಗಳನ್ನು ಅಂಗೀಕರಿಸುವ ಹಕ್ಕು ಅಧಿಕಾರಿಯವರಿಗೆ ಮೀಸಲಾಗಿದೆ. ದ್ವಿಪ್ರತಿ ಟೆಂಡರ್‌ಗಳೊಡನೆ ತಮ್ಮ ರಿನ್ಯೂಯಲ್ ಆದ ರಿಜಿಸ್ಟ್ರೇಷನ್ ಪ್ರತಿಯೊಂದನ್ನು ಕಂಟ್ರಾಕ್ಟರ್‌ಗಳು ಕೊಡಬೇಕು. ಆವರೇನಾದರೂ ಸ್ಥಾಯಿ ಠೇವಣಿ ಪಾವತಿ ಮಾಡಿದ್ದರೆ ಟೆಂಡರ್ ಕೊಡುವ ಕಾಲದಲ್ಲಿ ಅರ್ನೆಸ್ಟ್ ಠೇವಣಿ ಹಣಕ್ಕೆ ವಿನಾಯಿತಿ ಪ್ರತಿಯನ್ನು ಮತ್ತು ರಿಜಿಸ್ಟ್ರೇಷನ್ ರಿನ್ಯೂಯಲ್ ಪ್ರತಿಯನ್ನು ಟೆಂಡರ್ ನೊಡನೆ ಲಗತ್ತಿಸಬೇಕು. ಕೆಲಸದ ಎಲ್ಲಾ ದಿನಗಳಲ್ಲಿ ಕಛೇರಿ ಕೆಲಸದ ವೇಳೆಗಳಲ್ಲಿ ಕೆ. ಆರ್. ಸಾಗರದಲ್ಲಿರುವ, ಕೆ. ಆರ್. ಸಾಗರ ವಿಭಾಗದ, ಎಕ್ಸಿಕ್ಯುಟೀವ್ ಇಂಜಿನಿಯರ್‌ರವರ ಕಚೇರಿಯಲ್ಲಿ ಹೆಚ್ಚು ವಿವರಗಳನ್ನು ಪಡೆಯಬಹುದು. ಸಾಧ್ಯವಾದರೆ ಅದೇ ದಿನ ಟೆಂಡರ್‌ಗಳನ್ನು ಒಡೆಯಲಾಗುವುದು.

ಸೀ ನಂ	ಕೆಲಸದ ಹೆಸರು	ಅಂದಾಜು ಮೊತ್ತ (ಟೆಂಡರ್‌ಗೆ ಇಟ್ಟಿರುವ ಕೆಲಸದ ಭಾಗ)	ಇ ಎಂ ಡಿ	ಕೆಲಸ ಮುಗಿಸಲು ಕಾಲಾವಧಿ
1	2	3	4	5
		ರೂ.	ರೂ.	
1	ಪಿ. ಡಿ. ಕೆಲಸಗಳು ಸೇರಿ ಕುಡ್ಲುಕುಪ್ಪೆಯಿಂದ ರುದ್ರ ಭೂಮಿಯ ವರೆಗೆ ರಸ್ತೆ ನಿರ್ಮಿಸುವುದು.	14038	351	3 ತಿಂಗಳು
2	ಪಿ. ಡಿ. ಕೆಲಸಗಳು ಸೇರಿ ಪಿ. ಡಿ ಎಸ್. ನಾಲೆಯ 21/10 ರಿಂದ ಲಲಿತನಾಳ್ಳ ಪೂರ್ವ ದಾರಿಯಲ್ಲಿ ರಸ್ತೆ ನಿರ್ಮಿಸುವುದು.	17853	446	4 ತಿಂಗಳು
3	ಪಿ. ಡಿ. ಎಸ್. ನಾಲೆಯ 14/21 ರಿಂದ ಅಡ್ಡಹಳ್ಳ ರಸ್ತೆ ವರೆಗೆ ಪೂರ್ವ ದಾರಿಯ ಜಮೀನಿಗೆ ಮೆಟಲಿಂಗ್ ಮತ್ತು ಸಿ. ಡಿ. ಕೆಲಸ ಮಾಡುವುದು.	17470	437	3 ತಿಂಗಳು

6 ಎರಡು ಫಾರಂಗಳ ಒಂದು ಸೆಟ್ ಟೆಂಡರ್ ಫಾರಂ ದರ (ವಾಪಸು ಮಾಡಲಾಗುವುದಿಲ್ಲ) ರೂ 5-15 ಪ್ರತಿ ಕೆಲಸಕ್ಕೆ

7 ಟೆಂಡರ್ ಕೊಡಲು ಅರ್ಹ ಕಂಟ್ರಾಕ್ಟರ್ ವರ್ಗ : ನಾಲ್ಕನೇ ವರ್ಗ ಮತ್ತು ಮೇಲ್ಪಟ್ಟು ಪ್ರತಿ ಕೆಲಸಕ್ಕೆ

ಎಂ. ರಾಮಸ್ವಾಮಿ,
ಎಕ್ಸಿಕ್ಯುಟೀವ್ ಇಂಜಿನಿಯರ್,
ಕೆ ಆರ್. ಸಾಗರ ವಿಭಾಗ

ವಚನಾಮೃತ

ಈಳೆ, ನಿಂಬೆ, ಮಾವು, ಮಾದಲಕ್ಕೆ ಹುಳಿನೀರನೆರೆದವರ್ಯಾರಯ್ಯ ?
ಕಬ್ಬು, ಬಾಳೆ, ಹಲಸು, ನಾರಿಕೇಳಕ್ಕೆ ಸಿಹಿ ನೀರ ನೆರೆದವರಾರಯ್ಯ ?
ಕಳವೆ, ಶಾವಿಗೆ, ನವಣೆ, ಜೋಳಕ್ಕೆ ಓಗರದ ಉದಕವ ನೆರೆದವರಾರಯ್ಯಾ ?
ಮರುಗ, ಮಲ್ಲಿಗೆ, ದವನ ಪಚ್ಚೆಗೆ ಪರಿಮಳದುದಕವ ನೆರೆದವರಾರಯ್ಯಾ ?
ಇಂತೀ ಜಲವು ಒಂದೇ, ನಿಲವು ಒಂದೇ, ಆಗಸ ಒಂದೇ,
ಒಂದೇ ಜಲವು ಹಲವು ದ್ರವ್ಯಂಗಳ ಕೂಡಿ ತನ್ನ ಪರಿ ಬೇರಾಗಿಹ ಹಾಗೆ
ಎನ್ನ ದೇವ ಬಿನ್ನಮಲ್ಲಿಕಾರ್ಜುನನು
ಹಲವು ಜಗಂಗಳ ಕೂಡಿರ್ದಡ್ಡೇನು ತನ್ನ ಪರಿಬೇರೆ. — ಅಕ್ಕ ಮಹಾದೇವಿ

ದಿವ್ಯವಾಣಿ

ಬೆಳಕನ್ನು ಹಿಡಿದುಕೊಂಡು ಹೋದರೆ, ಕತ್ತಲೆಯು ತಾನಾಗಿಯೇ ದೂರವಾಗುವುದು. — ಚರ್ಚಿಲ್

ವುಡ್‌ಲಾಂಡ್ಸ್ 22 12 72 ರಿಂದ ಅಮೋಘ 2ನೇ ವಾರ

ಸೆವೆ ಆರ್ಟ್ಸ್ ಪಿಕ್ಚರ್ಸ್‌ರವರ ಹಿಂದಿ ವರ್ಣ ಚಿತ್ರ

ರಾಜಾ ಜಾನಿ

ಪ್ರತಿ ದಿನ 3 ಪ್ರದರ್ಶನಗಳು

ಪಾತ್ರ – ಧರ್ಮೇಂದ್ರ ಹೇಮಮಾಲಿನಿ ಪ್ರೇಂಚೋಪ್ರ ಪ್ರೇಂನಾಥ್
ಹೆಲ್ಪ್ ಸಂಗೀತ – ಲಕ್ಷ್ಮೀಕಾಂತ್ ಪ್ಯಾರೇಲಾಲ್

ಬೆಳಗಿನ ಪ್ರದರ್ಶನ 10-30 ಕ್ಕೆ ವೀರಸಂಕಲ್ಪ

ಅಪೆರಾ 22 12 72 ರಿಂದ

ಅತ್ಯಮೋಘ ಹಿಂದಿ ಕಲರ್ ಚಿತ್ರ

ಗೂಡುಪುರಾಣ

ಈಸ್ಟ್‌ಮನ್ ಕಲರ್ ತೆಲುಗು ಚಿತ್ರ

ನಿರ್ದೇಶನ : ಕೆ. ಲಕ್ಷ್ಮೀದೀಪಕ್

ದಿನ 3 ಪ್ರದರ್ಶನಗಳು

ಭಾರತದಲ್ಲಿ ಗೋವಧೆ
ಪೂರ್ಣ ನಿಷೇಧವಾಗಲಿ

Protect the Cow

Help The Gorakshana

— Humanitarian Propoganda Monthly....

Edited Printed and Published by Dharmapracharanirata M S Krishna Rao (Proprietor) at the Satvavadi Press, Chamaraja puram, Mysore 4